# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ

(ಸಾಂಸಧಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)
ಸೋಮವಾರ, ದಿನಾಂಕ:23 ಆಗಸ್ಟ್ 2021.

**ಸಂಖ್ಯೆ:67**

**ವಿಷಯ :** **ವಿಧಾನ ಪರಿಷತ್ತಿನ ಮಾನ್ಯ ಮಾಜಿ ಸದಸ್ಯರಿಗೆ ವಾಹನ ಪಾಸ್ ವಿತರಿಸುವ ಬಗ್ಗೆ.**

*****

ವಿಧಾನ ಪರಿಷತ್ತಿನ ಮಾನ್ಯ ಮಾಜಿ ಸದಸ್ಯರುಗಳಿಗೆ ಒಂದು ವಾಹನ ಪಾಸ್‌ನ್ನು ಈಗಾಗಲೇ ವಿತರಿಸುತ್ತಿದ್ದು, ಪ್ರಸ್ತುತ, ಮಾನ್ಯ ಸಭಾಪತಿಯವರು ಮಾಜಿ ಸದಸ್ಯರಿಗೂ ಸಹ ತಲಾ ಎರಡು ವಾಹನ ಪಾಸ್‌ಗಳನ್ನು ವಿತರಿಸಲು ಆದೇಶ ನೀಡಿರುತ್ತಾರೆ, ವಾಹನಗಳ ನೋಂದಾವಣಿಯು ಮಾನ್ಯ ಮಾಜಿ ಸದಸ್ಯರ ಅಥವಾ ಅವರ ಕುಟುಂಬ ಸದಸ್ಯರ ಹೆಸರಿನಲ್ಲಿ ನೋಂದಣಿ ಕಡ್ಡಾಯವಾಗಿರಬೇಕಾಗಿರುತ್ತದೆ.

ವಿಧಾನ ಪರಿಷತ್ತಿನ ಕಾರ್ಯದರ್ಶಿಯವರ ಸಹಿ ಇಲ್ಲದಿರುವ ಗುರುತಿನ ಚೀಟಿ ಸಂಖ್ಯೆ, ವಾಹನ ಸಂಖ್ಯೆ ಇಲ್ಲದಿರುವುದು ಅಥವಾ ಅಳಸಿ ಹೋಗಿರುವ ಅಥವಾ ಹಳೆಯ ವಾಹನ ಪಾಸ್‌ಗಳನ್ನು ಹೊಂದಿದ ವಾಹನಗಳು ಶಾಸಕರ ಭವನ/ವಿಧಾನಸೌಧದ ಒಳಗೆ ಪ್ರವೇಶಿಸುತ್ತಿದ್ದು ಕೆಲವೊಂದು ವಾಹನಗಳಲ್ಲಿ ಕಲರ್ ಜೆರಾಕ್ಸ್ ಪಾಸ್‌ಗಳು ಇರುವುದು ಸಹ ಸಚಿವಾಲಯದ ಗಮನಕ್ಕೆ ಬಂದಿರುತ್ತದೆ.

ಪಾಸ್‌ಗಳ ದುರ್ಬಳಕೆಯನ್ನು ನಿರ್ಬಂದಿಸುವ ದೃಷ್ಟಿಯಿಂದ ಹೆಚ್ಚುವರಿ ವಾಹನ ಪಾಸ್‌ಗಳ ಕೋರಿಕೆಯನ್ನು ಕಡ್ಡಾಯವಾಗಿ ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಈ ನಿಟ್ಟಿನಲ್ಲಿ ಮಾನ್ಯ ಸದಸ್ಯರುಗಳು ಸಹಕರಿಸಬೇಕೆಂದು ಕೋರಿದೆ.

ವಿಧಾನ ಪರಿಷತ್ತಿನ ಮಾನ್ಯ ಹಾಲಿ ಮತ್ತು ಮಾಜಿ ಸದಸ್ಯರುಗಳು ಕಾರ್ಯದರ್ಶಿಯವರ ಕಚೇರಿ, ಕೊಠಡಿ ಸಂಖ್ಯೆ: 156-ಸಿ, ಮೊದಲನೇ ಮಹಡಿ, ವಿಧಾನ ಸೌಧ, ಬೆಂಗಳೂರು, ಇವರಿಂದ ವಾಹನ ಪಾಸ್‌ಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಕೆ.ಆರ್. ಮಹಾಲಕ್ಷ್ಮಿ,
**ಕಾರ್ಯದರ್ಶಿ,**
**ಕರ್ನಾಟಕ ವಿಧಾನ ಪರಿಷತ್ತು.**

- **ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಹಾಲಿ/ಮಾಜಿ ಸದಸ್ಯರುಗಳ ಮಾಹಿತಿಗಾಗಿ.**